**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ**

**ಸಿ.ಸಿ. ನಂ. 529/2025** **ಫ್ರಾ.ಸಾ - 3**

**ಚಾ.ಸಾ –**

**ದಿನಾಂಕಃ 25.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಮುತ್ತಮ್ಮ |
| ತಂದೆಯ ಹೆಸರು | : | ಲೇಟ್ ಮುತ್ತಪ್ಪ |
| ವಯಸ್ಸು | : | 71ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ನೆಮ್ಮಲೆ |

**ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ–**

ಚಾಸಾ 1 ನನ್ನ ಮಗಳು. ಚಾಸಾ 2 ನನ್ನ ಅಳಿಯ. ಆರೋಪಿತರು ಗೊತ್ತು. ನಾನು ನೋಡಿದಾಗ ಜೆ. ಸಿ. ಬಿ ಚಾಸಾ 2 ರವರ ಗದ್ದೆಯ ಹತ್ತಿರ ನಿಂತಿತ್ತು. ನಾನು ಅಲ್ಲಿ ಇದ್ದೆ. ನನ್ನ ಮಗಳು ಅಲ್ಲಿಗೆ ಬಂದಾಗ ಆರೋಪಿಗಳು ಆಕೆಗೆ ಹೊಡೆದು ಗಲಾಟೆಯಲ್ಲಿ ಆಕೆಯ ನೇರಳೆ ಬಣ್ಣದ ಬಟ್ಟೆ ಹರಿದುಹೋಗಿರುತ್ತದೆ. ಸಾಕ್ಷಿಯು ಮು ಮಾ 1 ಅನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ–**

ದಿ. 21.01.2025 ರಂದು ಬೆ. 09.30 ಸಮಯದಲ್ಲಿ ನಾನು ಮನೆಯಲ್ಲಿದ್ದಾಗ ಮನೆಯ ಮುಂದಿನ ದಾರಿಯಲ್ಲಿ ಜೋರಾಗಿ ಜಗಳ ಮಾಡುವ ಶಬ್ದ ಕೇಳಿತು ಎಂದರೆ ಸರಿ. ಆಗ ನಾನು ಹೊರಗಡೆ ಬಂದು ನೋಡಿದಾಗ ಜೆಸಿಬಿ ಇದ್ದು ಅದರ ಮುಂದೆ ಚಾಸಾ 1 ಮತ್ತು 2 ರವರು ನಿಂತಿದ್ದರು ಎಂದರೆ ಸರಿ, ಆರೋಪಿತರು ಅಲ್ಲಿದ್ದರು ಎಂದರೆ ಸರಿ. ಆರೋಪಿತರು

ಚಾಸಾ 1 ಮತ್ತು 2 ರವರನ್ನು ಕುರಿತು ನಾಯಿ ಸೂಳೆ ಮಗನೆ ನಿನ್ನನ್ನು ಸಾಯಿಸುವುದಾಗಿ ಅವಾಚ್ಯಶಬ್ದಗಳಿಂದ ಬೈದು ಕೊಲೆ ಬೆದರಿಕೆ ಹಾಕಿದರು ಎಂದರೆ ಸರಿ. ಆರೋಪಿತರು ಚಾಸಾ 2 ರವರ ಜೊತೆ ಗಲಾಟೆ ಮಾಡಿ ಹೊಡೆದು ನೂಕಾಟ ತಳ್ಳಾಟ ಮಾಡುತ್ತಿದ್ದಾಗ ಚಾಸಾ 1 ರವರು ಅದನ್ನು ತಡೆಯಲು ಹೋದಾಗ ಅವರಿಗೂ ಸಹ ಕೈ ಯಿಂದ ಹೊಡೆದು 1ನೇ ಆರೋಪಿ ಚಾಸಾ 1 ರವರ ಚೂಡಿದಾರ್ ಬಟ್ಟೆಯನ್ನು ಹರಿದುಹಾಕಿ ಮಾನಕ್ಕೆ ಕುಂದುಂಟು ಮಾಡಿದರು ಎಂದರೆ ಸರಿ. ನಾನು ಜೋರಾಗಿ ಕಿರುಚಿಕೊಂಡಾಗ ಆರೋಪಿತರು ಅಲ್ಲಿಂದ ಓಡಿ ಹೋದರು ಎಂದರೆ ಸರಿ. ನಂತರ ಚಾಸಾ 1 ರವರು ಶ್ರೀಮಂಗಲ ಪೊ. ಠಾಣೆಗೆ ಹೋಗಿ ದೂರು ಕೊಟ್ಟು ಎಂದರೆ ಸರಿ. ನಂತರ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಳು ಎಂದರೆ ಸರಿ. ಈ ಬಗ್ಗೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದುಕೊಂಡರು ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಸಿ. ಪಿ. ಪಿ. ವಕೀಲರಿಂದಃ**

ನನಗೆ ಚಾಸಾ 1 ಒಬ್ಬಳೇ ಮಗಳು. 3 ವರ್ಷಗಳ ಹಿಂದಿನಿಂದ ಚಾಸಾ 1 ರವರ ಮನೆಯಲ್ಲಿ ವಾಸವಾಗಿದ್ದೇನೆ. ನನ್ನ ಅಳಿಯ ವ್ಯವಸಾಯ ಮಾಡುತ್ತೇನೆ. ಮಗಳು ಕೆಲಸಕ್ಕೆ ಹೋಗಲ್ಲ. ನನ್ನ ಅಳಿಯನಿಗೆ 8 ಎಕರೆ ಜಮೀನು ಇದೆ. ನನ್ನ ಮಗಳಿಗೆ ಒಬ್ಬ ಮಗ. ನನ್ನನ್ನು ಚಾಸಾ 1 ಮತ್ತು 2 ರವರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ನಾನು ಆದಿನ ಮನೆಯಲ್ಲಿದ್ದು ಒಳಗೆ ಕಸ ಗೂಡಿಸುತ್ತಿದ್ದೆ. ಆರೋಪಿಗಳು ಗಲಾಟೆ ವಿಚಾರದ ರಸ್ತೆಯಲ್ಲಿ ಓಡಾಡುತ್ತಾರೆ ಎಂದರೆ ಸರಿ. 2ನೇ ಆರೋಪಿಗೆ ರಸ್ತೆಯ ನಂತರ ಅವರ ತೋಟ ಇದೆ ಎಂದರೆ ಸರಿ. ನಾನು ಜೆಸಿಬಿಯ ವಾಹನದ ಸಂಖ್ಯೆ ನೋಡಲಿಲ್ಲ. ಜೆಸಿಬಿ ಕೆಲಸ ಮಾಡಲು ಬಂದಿತ್ತು, ಆದರೆ ಕೆಲಸ ಮಾಡಲು ಬಿಟ್ಟಿರುವುದಿಲ್ಲ. ಜೆಸಿಬಿಯ ಚಾಲಕ ಯಾರು ಎಂದು ಗೊತ್ತಿಲ್ಲ. ದಾರಿ ವಿಚಾರವಾಗಿ ನನ್ನ ಅಳಿಯ ಯಾವುದೇ ದೂರನ್ನು ಕೊಟ್ಟಿಲ್ಲ. ನನ್ನ ಅಳಿಯ ರಸ್ತೆ ವಿಚಾರವಾಗಿ ಯಾವಾಗಲೂ ಗಲಾಟೆ ಮಾಡುತ್ತಿದ್ದ ಕಾರಣಕ್ಕೆ ಆರೋಪಿಗಳು ಪಂಚಾಯಿತಿಗೆ ಹೋಗಿ ದೂರು ನೀಡಿರುವುದಿಲ್ಲ. ಆರೋಪಿತರು ಅವಿವಾಹಿತರು. ನಾನು ಮನೆ ಒಳಗೆ ಕಸ ಗೂಡಿಸುತ್ತಿದ್ದರಿಂದ ನಾನು ಮೇಲೆ ಹೇಳಿದಂತೆ ಏನನ್ನು ನೋಡಿಲ್ಲ, ಅಳಿಯನಿಗೆ ಸಹಾಯ

ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಅವಿವಾಹಿತರಾಗಿದ್ದು ಅವರ ಆಸ್ತಿಯನ್ನು ಹೊಡೆದುಕೊಳ್ಳಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರಸ್ತೆ ಎಲ್ಲರಿಗೂ ಸೇರಿದ್ದು. ಮು ಮಾ 1 ಚಾಸಾ 1 ರವರದ್ದಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಚಾಸಾ 1 ಮತ್ತು 2 ರವರಿಗೆ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಕೊಲೆ ಬೆದರಿಕೆ ಹಾಕಿಲ್ಲ, ಅವರನ್ನು ತಡೆದಿರುವುದಿಲ್ಲ, ಅವರ ಮಾನಕ್ಕೆ ಹಾನಿ ಉಂಟು ಮಾಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

Sd/-

ಸಿವಿಲ್ ನ್ಯಾಯಾಧೀಶರು

ಮತ್ತು ಪ್ರಧನ್ಯಾದಂ., ಪೊನ್ನಂಪೇಟೆ